


ವರ್ಷದ ಒಳಗಿದ್ದರೆ, ಅವನನ್ನೂ ಕೂಡ ವಯಸ್ಕ ಮತ್ತು ಶಿಕ್ಷೆಗೆ ಅರ್ಹ ಎಂದು ಪರಿಗಣಿಸಲಾಗುವುದು (ಜೆ.ಜೆ.ಕಾಯ್ದೆ) ಎಂದು ಬದಲಾಯಿಸಲಾಗಿದೆ.

'ಅತ್ಯಾಚಾರವು ಕೇವಲ ಮಹಿಳೆಯ ದೇಹದ ಮೇಲಾಗುವ ಅಪರಾಧವಲ್ಲ; ಅದು ಇಡೀ ಸಮಾಜದ ಮೇಲಾಗುವ ಅಪರಾಧ. ಆ ಕೃತ್ಯವು ಮಹಿಳೆಯ ಮಾನಸಿಕ ಸ್ಥಿತಿಯನ್ನು ಸಂಪೂರ್ಣವಾಗಿ ನಾಶ ಮಾಡುತ್ತದೆ ಹಾಗೂ ಅವಳನ್ನು ಭಾವನಾತ್ಮಕ ಗಂಡಾಂತರಕ್ಕೆ ದೂಡುತ್ತದೆ. ಈ ಕಾರಣಗಳಿಂದ ಅತ್ಯಾಚಾರವು ಅತ್ಯಂತ ಹೇಯ ಅಪರಾಧ. ಅದು ಮೂಲಭೂತ ಹಕ್ಕುಗಳ ವಿರುದ್ಧ ಎಸಗಿದ ಅಪರಾಧವಾಗುತ್ತದೆ ಮತ್ತು ಅದು ನಮ್ಮ ಸಂವಿಧಾನದ 21ನೇ ವಿಧಿ ನೀಡುವ ಮಾನವ ಸಹಜ ಘನತೆಯಿಂದ ಬದುಕುವ ಹಕ್ಕನ್ನೇ ನಾಶಮಾಡುತ್ತದೆ. ಅತ್ಯಾಚಾರಕ್ಕೊಳಗಾದ ಮಹಿಳೆಗೆ ಅದೊಂದು ಕೊನೆಯಿಲ್ಲದ ಅಪಮಾನ. ಅದನ್ನು ಮಾನವನ ಘನತೆಗೇ ಕುಂದು ತರುವ ಅಪರಾಧವೆಂದು ಪರಿಗಣಿಸಬೇಕು; ಮತ್ತು ಅದು ಹಿಂಸೆಯ

## ಸಹಾಯವಾಣಿ ಸೌಲಭ್ಯ

ಮಹಿಳೆ ಮತ್ತು ಮಕ್ಕಳ ಸುರಕ್ಷತೆಗೆ ಪ್ಯಾನಿಕ್ ಕೋಡ್, ಪಿಂಕ್ ಹೊಯ್ಸಳ, ಮಹಿಳಾ ಠಾಣೆ, ಮಹಿಳಾ ವಿಶೇಷ ಪೊಲೀಸ್ ಪಡೆಗಳ ರಚನೆ ಜತೆಗೆ ಬೀಟ್ ವ್ಯವಸ್ಥೆ ಇದೆ.

ತುರ್ತು ಮತ್ತು ಅಗತ್ಯ ಸಂದರ್ಭಗಳಲ್ಲಿ ಮಹಿಳಾ ಸಹಾಯವಾಣಿ ಸಂಖ್ಯೆ: 1091 ಅಥವಾ 080–22943225 ಸಂಪರ್ಕಿಸಬಹುದು.

## ಲೈಂಗಿಕ ದೌರ್ಜನ್ಯ ತಡೆಗಾಗಿ ವಿ.ಎಸ್. ಉಗ್ರಪ್ಪ ಅಧ್ಯಕ್ಷತೆ ಸಮಿತಿಯ ಪ್ರಮುಖ ಶಿಫಾರಸುಗಳು

- ಕೃತ್ಯ ನಡೆಸುವವರ ಆಸ್ತಿ ಮುಟ್ಟುಗೋಲು ಹಾಕಿಕೊಂಡು ಸಂತ್ರಸ್ತರಿಗೆ ಪರಿಹಾರ ನೀಡಬೇಕು. ಕೃತ್ಯ ಎಸಗುವವರಿಗೆ ಸರ್ಕಾರದ ಎಲ್ಲ ಸೌಲಭ್ಯಗಳು ಮತ್ತು ಮತದಾನದ ಹಕ್ಕು ರದ್ದುಪಡಿಸಬೇಕು.
- ಕೇಸ್ ದಾಖಲಾದ 24 ತಾಸಿನೊಳಗೆ ಸಂತ್ರಸ್ತರಿಗೆ ವೈದ್ಯಕೀಯ ಪರಿಹಾರ ನೀಡಬೇಕು ಮತ್ತು ಪರಿಹಾರದ ಅರ್ಜಿಯನ್ನು ತನಿಖಾಧಿಕಾರಿಯೇ ಒದಗಿಸಬೇಕು.
- ಪ್ರಕರಣಗಳ ಆಧಾರದಲ್ಲಿ ಪರಿಹಾರ ಮೊತ್ತದ ಸ್ಲ್ಯಾಬ್‌ಗಳನ್ನು ನಿಗದಿ ಮಾಡಬೇಕು. ಪರಿಹಾರ ನೀಡುವ ಜತೆಗೆ, ಸಂತ್ರಸ್ತರು ಶಿಕ್ಷಣ ಹಾಗೂ ವೃತ್ತಿ ಮುಂದುವರಿಸಲು ಪೂರಕ ವಾತಾವರಣ ನಿರ್ಮಿಸಬೇಕು.
- ಪ್ರಕರಣಗಳ ತನಿಖೆ ಹಾಗೂ ವಿಚಾರಣೆಗೆ ಕಾನೂನು ರೀತಿ ಪೂರ್ಣಗೊಳ್ಳಲು ಸ್ಪಷ್ಟವಾಗಿ ಕಾಲಮಿತಿ ನಿಗದಿ ಮಾಡಬೇಕು. ನ್ಯಾಯದಾನ ವಿಳಂಬ ತಪ್ಪಿಸಲು ರಾಷ್ಟ್ರೀಯ ನೀತಿ ರೂಪಿಸುವಂತೆ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಬೇಕು.
- ಶಿಕ್ಷೆ ಪ್ರಮಾಣ ಹೆಚ್ಚಿದರೆ ಕೃತ್ಯಗಳ ಪ್ರಮಾಣ ತಗ್ಗುತ್ತದೆ. ಈ ಕಾರಣಕ್ಕೆ ಅಪರಾಧ ಸಾಬೀತುಪಡಿಸಲು ಸಂಬಂಧಪಟ್ಟ ಎಸ್ಪಿ ಹಾಗೂ ಸ್ಪೆಷಲ್ ಪ್ರಾಸಿಕ್ಯೂಟರ್‌ಗೆ ಹೊಣೆಗಾರಿಕೆ ನಿಗದಿ ಮಾಡಬೇಕು.
- ಪರಿಹಾರ ಪಡೆಯುವ ದುರುದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸುವವರಿಂದ ಬಡ್ಡಿ ಸಹಿತವಾಗಿ ಪರಿಹಾರ ವಾಪಸ್ ಪಡೆಯುವ ಕಾನೂನುಬದ್ಧ ಅವಕಾಶ ಕಲ್ಪಿಸಬೇಕು.